ಪಿಡಬ್ಲ್ಯೂಃ2

ಇಂದು ದಿನಾಂಕಃ 05.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ವಿ ವಿ ಎಂ ವಕೀಲರಿಂದಃ

ನಮ್ಮ ಆಸ್ತಿ ಸರ್ವೆನಂ.351/2 ರ ಪೂರ್ವಕ್ಕೆ ನನ್ನ ಗಂಡನ ಅಣ್ಣನಾದ ಪ್ರಕಾಶ ನಾಗವಂದರ ರವರ ಆಸ್ತಿ ಬರುತ್ತದೆ ಎಂದರೆ ಸರಿ. ಅವರ ಆಸ್ತಿ ಸಂಖ್ಯೆ 351/1 ಎಂದರೆ ಸರಿ. ನಮ್ಮ ಆಸ್ತಿಯ ಪಶ್ಚಿಮದ ದಿಕ್ಕಿಗೆ ರುದ್ರಪ್ಪ ಚನ್ನಳ್ಳಿರವರ ಆಸ್ತಿ ಬರುತ್ತದೆ ಎಂದರೆ ಸರಿ. ನಮ್ಮ ಆಸ್ತಿಯ ದಕ್ಷಿಣಕ್ಕೆ ಬಾಬಣ್ಣ ಅಣಗೊಂಡರವರ ಆಸ್ತಿ ಬರುತ್ತದೆ ಎಂದರೆ ಸರಿ. ಪ್ರಕಾಶ ನಾಗವಂದ ರವರ ಆಸ್ತಿಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಯವರ ಆಸ್ತಿ ಬರುತ್ತದೆ ಎಂದರೆ ಸರಿ. ಪ್ರತಿವಾದಿ ಆಸ್ತಿಯ ಪೂರ್ವ ದಿಕ್ಕಿಗೆ ಬಾಲಪ್ಪ ಹುಲಿಕಟ್ಟಿ ಹಾಗೂ ಬೀಮಪ್ಪ ಹುಲಿಕಟ್ಟಿ ರವರ ಆಸ್ತಿ ಬರುತ್ತದೆ ಎಂದರೆ ಆ ಬಗ್ಗೆ ನನಗೆ ಅಷ್ಟು ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಕಾಶ ನಾಗವಂದರವರ ಆಸ್ತಿಯ ಪೂರ್ವಕ್ಕೆ ಕೃಷ್ಣಪ್ಪ ಸಾನು ರವರ ಆಸ್ತಿ ಬರುತ್ತದೆ ಎಂದರೆ ಸರಿ.

2. ಬಾಬಣ್ಣ ಅಣಗೊಂಡರವರ ಪಕ್ಷಗಾರನ್ನಾಗಿ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವೆಯನ್ನು ಹೂಡಲು ಮಾಹಿತಿಯನ್ನು ನನ್ನ ಗಂಡ ನೀಡಿರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ವಕೀಲರ ಬಳಿ ನಾನು ನಮ್ಮ ಆಸ್ತಿಯ ಚಕ್ಕುಬಂದಿಯ ಬಗ್ಗೆ ತಿಳಿಸಿರುತ್ತೇನೆ. ನಮ್ಮ ಆಸ್ತಿಯ ದಕ್ಷಿಣಕ್ಕೆ ಬಾಬಣ್ಣ ಅಣಗೊಂಡರವರ ಆಸ್ತಿ ಬರುತ್ತದೆ ಎಂದು ನಮ್ಮ ವಕೀಲರ ಬಳಿ ತಿಳಿಸಿರುತ್ತೇನೆ.

3. ದಾವೇದ ದಾರಿಯನ್ನು ಸರ್ವೆಯನ್ನು ನನ್ನ ಗಂಡ ಮಾಡಿಸಿರಬಹುದು ಆದರೆ ಅದರ ಮಾಹಿತಿ ನನಗೆ ಇರುವುದಿಲ್ಲ. ನನ್ನ ಗಂಡ ತೀರಿಕೊಂಡ ನಂತರ ನಾನು ಯಾವುದೇ ಸರ್ವೆ ಮಾಡಿಸಿರುವುದಿಲ್ಲ. ದಾರಿಯ ವಿಸ್ತೀರ್ಣ 8 ಅಡಿ ಇರುತ್ತದೆ ಎಂಬುದರ ಬಗ್ಗೆ ಅಷ್ಟೇ ನನಗೆ ಮಾಹಿತಿ ಇರುತ್ತದೆ. ದಾರಿ ಎಷ್ಟು ಗುಂಟೆ ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ದಾರಿಯನ್ನು ಮಾಡುತ್ತಿದ್ದರು ನಾವು ಅದನ್ನು ತಡೆ ಹಿಡಿದಿರುತ್ತೇವೆ. ಆ ರೀತಿ 2016 ರಲ್ಲಿ ಒಂದು ಬಾರಿ ಹಾಗೂ 2023 ಫೆಬ್ರವರಿ-ಮಾರ್ಚ ತಿಂಗಳಿನಲ್ಲಿ ರಸ್ತೆಯನ್ನು ಮಾಡಲು ಪ್ರಯತ್ನಿಸಿರುತ್ತಾರೆ. ಆ ರೀತಿ 8 ಅಡಿ ಇದ್ದಂತಹ ದಾರಿಯನ್ನು ಸುಮಾರು 25 ಫೂಟ್ ರಷ್ಟು ಅಗಲ ಮಾಡಿರುತ್ತಾರೆ. ಅದನ್ನು ಅಳತೆ ಮಾಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 2016 ರಲ್ಲಿ ನಮ್ಮ ಮನೆಯವರು ಇರುವಾಗ ಅಳತೆಯನ್ನು

ಮಾಡಿಸಿರುತ್ತೇವೆ. ಸದರಿ ಅಳತೆಯನ್ನು ಯಾರ ಕಡೆಯಿಂದ ಮಾಡಿಸಿದರು ಎಂದು ನನಗೆ



ಮಾಹಿತಿ ಇರುವುದಿಲ್ಲ.

4. ದಾವೆದ ದಾರಿಯ ಉತ್ತರದ ಅಂಚುನ್ನು ನಮ್ಮ ಹಸ್ತ ನಕ್ಷೆಯಲ್ಲಿ X,Y ತೋರಿಸಿರುತ್ತೇವೆ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯರ ಆಸ್ತಿಯ ನಡುವಿನ ಹದ್ದನ್ನು L K D ಹಸ್ತನಕ್ಷೆಯಲ್ಲಿ ತೋರಿಸಿರುತ್ತೇವೆ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯರ ಆಸ್ತಿಗಳ ನಡುವೆ ಬಾಂದ್ ಕಲ್ಲುಗಳು ಇರುತ್ತವೆ. ಹಸ್ತ ನಕ್ಷೆಯಲ್ಲಿ ತೋರಿಸಿರುವಂತೆ L K D ಅಂಚನ್ನು ನಾಶಪಡಿಸದೇನೇ ನಮ್ಮ ಆಸ್ತಿಯನ್ನು ಪ್ರತಿವಾದಿಯರು ಅತೀಕ್ರಮ ಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯರು ನಮ್ಮ ಆಸ್ತಿಯನ್ನು ಅತೀಕ್ರಮ ಪಡಿಸಿಕೊಂಡಿರತ್ತಾರೆ ಎಂದು ನುಡಿದಿರುತ್ತಾರೆ. L K D ಗುಂಟ ಬಳಿ ಬಾಂದ್ ಕಲ್ಲು ಹಾಗೂ ಬದು ಇರುತ್ತದೆ. X,Y ನ ಉತ್ತರ ಭಾಗದ ಜಾಗವನ್ನು ಪ್ರತಿವಾದಿಯರು ಅತೀಕ್ರಮ ಮಾಡಿ ದಾರಿ ಮಾಡುತ್ತಿದ್ದಾರೆ ಎಂದು ನಾನು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅಷ್ಟು ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

5. ಈ ಮೊದಲು ಇದ್ದಂತಹ ದಾರಿಯನ್ನು ನಾಶಪಡಿಸುವ ಸಲುವಾಗಿ ನಾವೇ ಅದನ್ನು ಕದರಿಸಿದ್ದೆವು ಎಂದರೆ ಸರಿಯಲ್ಲ. ಪ್ರತಿವಾದಿಯರು X,Y ಎಂದು ತೋರಿಸಿರು ದಾರಿಯಲ್ಲಿಯೇ ಬಂದು ಅವರ ಹೊಲಕ್ಕೆ ಹೋಗಬೇಕು ಎಂದರೆ ಸರಿ. ನಮ್ಮ ಆಸ್ತಿಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಯರ ಘರಾಣೇದ ಆಸ್ತಿ ಇದೆ ಎಂದು ಸುಳ್ಳು ಸಾಕ್ಷ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪೂರ್ವಜರ ಕಾಲದಲ್ಲಿಯೇ ದಾವೇ ದಾರಿ 16 ಫೂಟ್ ಅಗಳವನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ದಾರಿಯಲ್ಲಿ ನಾವೇ 8 ಫೂಟ್ ದಾರಿಯನ್ನು ಅತೀಕ್ರಮ ಪಡಿಸಿದ್ದು ಅದನ್ನು ಜೆ ಸಿ ಬಿ ಯಿಂದ ಕೆಡಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ಉಳಿದ ದಾರಿಯನ್ನೂ ಕೂಡ ಒತ್ತುವರಿ ಮಾಡಿ ನಾವು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯಲ್ಲಿ ಪೂಟ್ ಖರಾಬು 11 ಗುಂಟೆ ಇತ್ತು ಎಂದರೆ ಸರಿಯಲಲ್ಲ. ಸಾಕ್ಷಿಯು ಮುಂದುವರೆದು 2 ಗುಂಟೆ ಇತ್ತು ಎಂದು ನುಡಿದಿರುತ್ತಾರೆ. ಆ ರೀತಿ ಖರಾಬ ಇರುವುದು ದಾರಿ ಖಾರಾಬು ಎಂದರೆ ಸರಿಯಲ್ಲ. ಸದರಿ ಖರಾಬು ಯಾವುದಕ್ಕೆ ಸಂಬಂದಪಟ್ಟಿದ್ದು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಅದು ಮೊದಲು 11 ಗುಂಟೆ ದಾರಿ ಖರಾಬು ಇತ್ತು ಎಂದರೆ ಸರಿಯಲ್ಲ. ಸದರಿ ಜಮೀನನ್ನು ಕಬಳಿಸುವ ಉದ್ದೇಶದಿಂದ ನಾವು 2 ಗುಂಟೆ ಖರಾಬು ಎಂದು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ದಾರಿಯಲ್ಲಿ ಓಡಾಡುತ್ತಿದ್ದಂತಹ ವ್ಯಕ್ತಿಗಳಿಗೆ ಯಾವುದೇ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. 16 ಫೂಟ್ ದಾರಿಯನ್ನು ಪೂರ್ವಜರು ಮೊದಲೇ ಬಿಟ್ಟಿರುವ ಕಾರಣದಿಂದ ನಾನು ಈ ದಾವೆಯಲ್ಲಿ ದಾರಿ ಕೇಳಲು ಅರ್ಹಳಲ್ಲ ಎಂದರೆ ಸರಿಯಲ್ಲ. ಅಸ್ತಿತ್ವದಲ್ಲಿ ಇರುವ ದಾರಿಯನ್ನು ಕಬಳಿಸುವ ಸಲುವಾಗಿ ಈ ದಾವೆಯನ್ನು

ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಖರವಾಗಿ ಯಾವ ದಿನಾಂಕದಂದು ನಮ್ಮ ಆಸ್ತಿಯನ್ನು



ಪ್ರತಿವಾದಿಯರು ಕಬಳಿಸಲು ಬಂದಿದ್ದರು ಎಂದು ನನಗೆ ಅಷ್ಟೇನು ಮಾಹಿತಿ ಇರುವುದಿಲ್ಲ ನನ್ನ ಗಂಡನಿಗೆ ಗೊತ್ತಿರುತ್ತದೆ. ನಾನು ನನ್ನ ಗಂಡನ ಬಳಿ ದಾವಾ ಆಸ್ತಿಯ ಬಗ್ಗೆ ಹೆಚ್ಚೇನು ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.